OCTOBER 31, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

71ನೇ ಕರ್ನಾಟಕ ರಾಜ್ಯೋತ್ಸವ; ನಾಡು–ನುಡಿಯ, 26 ವಿವಿಧ ಕ್ಷೇತ್ರಗಳ, 71 ಜನ ಸಾಧಕರಿಗೆ, ರಾಜ್ಯೋತ್ಸವ ಪ್ರಶಸ್ತಿ.

ಸರ್ದಾರ ವಲ್ಲಭಭಾಯಿ ಪಟೇಲ ಅವರ, 151ನೇ ಜಯಂತ್ಯುತ್ಸವ; ನಾಡಿನಾದ್ಯಂತ ರಾಷ್ಟ್ರೀಯ ಏಕತಾ ದಿನಾಚರಣೆ.

ಮಾಧ್ಯಮ ಮತ್ತು ಮನೋರಂಜನಾ ಪರಿಸರ ವ್ಯವಸ್ಥೆ ಬಲಪಡಿಸಲು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ, ಚಂಚಲಕುಮಾರ, ಒತ್ತು.

ನಾಳೆ ನವೆಂಬರ್ ಒಂದನೇ ತಾರೀಖು, ಬೆಂಗಳೂರು – ಮುಂಬೈ ಮಧ್ಯೆ, ವಂದೇ ಭಾರತ ಸ್ಲೀಪರ್ ರೈಲು ಸೇವೆಗೆ, ಚಾಲನೆ.

<><><>

ಈಗ ವಾರ್ತೆಗಳ ವಿವರ

<><><>

ನಾಡು–ನುಡಿಯ ಸೇವೆಯಲ್ಲಿ ಸಾರ್ಥಕ್ಯ ಕಂಡ, ಕನ್ನಡ ನಾಡಿನ, 26 ವಿವಿಧ ಕ್ಷೇತ್ರಗಳ 71 ಜನ ಸಾಧಕರಿಗೆ, ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಘೋಷಿಸಿದೆ. ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಗಣ್ಯರನ್ನು, ಅಭಿನಂದಿಸಿದ್ದಾರೆ. ಕನ್ನಡ ನಾಡು, ನುಡಿ, ಸಂಸ್ಕೃತಿ ಹಿರಿಮೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದ ಎಲ್ಲ ಮಹನೀಯರ ಸಾಧನೆಯ ಪಯಣ ಹೀಗೆ ಮುಂದುವರಿಯಲಿ ಎಂದು, ಅವರು ಹಾರೈಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ

ಶಿವರಾಜ ತಂಗಡಗಿ, ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ, ಪ್ರಶಸ್ತಿ 5 ಲಕ್ಷ ರೂಪಾಯಿ ನಗದು, 25 ಗ್ರಾಂ ಚಿನ್ನದ ಪದಕ ಒಳಗೊಂಡಿದ್ದು, ನಾಳೆ ನವೆಂಬರ್ 1ನೇ ತಾರೀಖು ಸಂಜೆ, ರವೀಂದ್ರ ಕಲಾಕ್ಷೇತ್ರದಲ್ಲಿ, ಮುಖ್ಯಮಂತ್ರಿಯವರು, ಪ್ರಶಸ್ತಿ ಪ್ರದಾನಿಸಿ, ಗೌರವಿಸಲಿದ್ದಾರೆ ಎಂದರು. ಗದುಗಿನ ಅನ್ನದಾನೇಶ್ವರ ಸ್ವಾಮೀಜಿ, ಕೊಪ್ಪಳದ ಜಾನಪದ ಕಲಾವಿದ ದಾವಲಸಾಬ ಅತ್ತಾರ, ಚಾಮರಾಜನಗರದ ಗೌರಮ್ಮ ಸೇರಿದಂತೆ, ಯಕ್ಷಗಾನ ಕ್ಷೇತ್ರದ ಹಿರಿಯ ಕಲಾವಿದ, ಉಡುಪಿಯ ಗೋಪಾಲ ಗಾಣಿಗ, ಹಿರಿಯ ಪತ್ರಕರ್ತ ಡಿ. ಉಮಾಪತಿ ಸೇರಿದಂತೆ, 71 ಜನ ನಾಡು-ನುಡಿಯ ಸೇವಕರು, ಗಣ್ಯರು ರಾಜ್ಯೋತ್ಸವ ಪ್ರಶಸ್ತಿ ಪಡೆಯಲಿದ್ದಾರೆ.

<><><>

ನವೆಂಬರ್ 1ರ, 71ನೇ ಕರ್ನಾಟಕ ರಾಜ್ಯೋತ್ಸವ ಆಚರಣೆಗೆ, ನಾಡಿನಾದ್ಯಂತ ಭರದ ಸಿದ್ಧತೆಗಳು ನಡೆಯುತ್ತಿವೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿರುವ, ಪ್ರಧಾನ ಕಾರ್ಯಕ್ರಮದಲ್ಲಿ, ನಾಳೆ ಬೆಳಗ್ಗೆ 9 ಗಂಟೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಧ್ವಜಾರೋಹಣ ನೆರವೇರಿಸಿ, ರಾಜ್ಯೋತ್ಸವದ ಸಂದೇಶ ನೀಡಲಿದ್ದಾರೆ. ದೂರದರ್ಶನದ ಚಂದನ ವಾಹಿನಿ, ಕಾರ್ಯಕ್ರಮವನ್ನು ನೇರವಾಗಿ ಬಿತ್ತರಿಸಲಿದೆ.

<><><>

ಬಾಡೋ೯ಲಿಯ ಸರದಾರ, ಉಕ್ಕಿನ ಮನುಷ್ಯ ಎಂದೇ ಖ್ಯಾತಿವೆತ್ತ, ಸ್ವತಂತ್ರ ಭಾರತದ ಪ್ರಥಮ ಉಪ ಪ್ರಧಾನಮಂತ್ರಿ ಹಾಗೂ ಗೃಹ ಖಾತೆ ಸಚಿವ, ಸರ್ದಾರ ವಲ್ಲಭಭಾಯಿ ಪಟೇಲ ಅವರ, 151ನೇ ಜನ್ಮದಿನವಾದ ಇಂದು, ನಾಡಿನಾದ್ಯಂತ ರಾಷ್ಟ್ರೀಯ ಏಕತಾ ದಿನ, ಶ್ರದ್ಧೆಯಿಂದ ಆಚರಿಸಲಾಗುತ್ತಿದೆ. ರಾಷ್ಟ್ರೀಯತೆ, ಭಾರತದ ಏಕೀಕರಣ ಹಾಗೂ ಸಮಗ್ರತೆಗೆ ಸರ್ದಾರ ಪಟೇಲರು ನೀಡಿದ ಕೊಡುಗೆಗಳನ್ನು, ಸ್ಮರಿಸಿ, ಅವರ ಸ್ಮೃತಿಗೆ ಶ್ರದ್ಧಾಸುಮನ ಅರ್ಪಿಸಲಾಗುತ್ತಿದೆ. ಬೆಂಗಳೂರಿನ ವಿಕಾಸಸೌಧದ ಸಮ್ಮೇಳನ ಸಭಾಂಗಣದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ರಾಷ್ಟ್ರೀಯ ಏಕತಾ ದಿನದ ಪ್ರಧಾನ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಏಕತಾ ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ. ರಾಷ್ಟ್ರೀಯ ಏಕತಾ ದಿನದ ಕುರಿತು, ಹಿರಿಯ ಇತಿಹಾಸ ಪ್ರಾಧ್ಯಾಪಕ, ಬೀದರಿನ ಡಾಕ್ಟರ್ ಶಿವಕುಮಾರ ಉಪ್ಪೆ, ಮಾಹಿತಿ ನೀಡಿದ್ದಾರೆ.

<><><>

ಶಿವಕುಮಾರ ಉಪ್ಪೆ ಧ್ವನಿ– 52 ಸೆಕೆಂದುಗಳು

<><><>

ರಾಜ್ಯದ ಮಾಧ್ಯಮ ಹಾಗೂ ಮನೋರಂಜನಾ ಕ್ಷೇತ್ರವನ್ನು ಬಲಪಡಿಸುವುದು, ಸಾಂಸ್ಥಿಕ ಸಾಮರ್ಥ್ಯವನ್ನು ಹೆಚ್ಚಿಸುವುದು ಹಾಗೂ ವಾಣಿಜ್ಯಿಕ ಪ್ರಸಾರ ವ್ಯವಸ್ಥೆ ಸುಲಭಗೊಳಿಸಿ, ಮಾಧ್ಯಮ ಗ್ರಾಹಕರಿಗೆ ಅನುಕೂಲ ಕಲ್ಪಿಸಲು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ, ಚಂಚಲಕುಮಾರ, ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ಅವರೊಂದಿಗೆ, ಬೆಂಗಳೂರಿನಲ್ಲಿ ಮಹತ್ವದ ಸಭೆ ನಡೆಸಿದರು.

WAVES – 2027; ಕರ್ನಾಟಕ ಮಾಧ್ಯಮ ಮತ್ತು ಮನೋರಂಜನಾ ಉದ್ಯಮ, ಸೃಜನಶೀಲ ಪ್ರತಿಭೆಗಳಿಗೆ ವೇದಿಕೆ ಮತ್ತು ಹೂಡಿಕೆ ಅವಕಾಶಗಳನ್ನು ಒದಗಿಸಲು, ಯೋಜಿಸುವಂತೆ, ವೇವ್ಸ್ ಬಜಾರ್‌ನಲ್ಲಿ, ರಾಜ್ಯದ ಚಿತ್ರನಿರ್ಮಾಪಕರು, ಸ್ಟುಡಿಯೋಗಳು ಹಾಗೂ ವಿತರಕರು ಭಾಗವಹಿಸಲು ಪ್ರೋತ್ಸಾಹಿಸುವಂತೆ, ಕಾರ್ಯದರ್ಶಿ ಚಂಚಲಕುಮಾರ ಕೋರಿದರು. ಎರಡನೇ ಆವೃತ್ತಿಯ, Create in India Challenges ನಲ್ಲಿ ವಿದ್ಯಾರ್ಥಿಗಳು ಮತ್ತು ಪ್ರತಿಭಾನ್ವಿತ, ಸೃಜನಶೀಲ ಡಿಜಿಟಲ್ ಹೂರಣ ನಿರ್ಮಾತೃ ಮತ್ತು ನಿರ್ವಾಹಕರ ಭಾಗವಹಿಸುವಿಕೆಯನ್ನು ಉತ್ತೇಜಿಸುವಂತೆ, ಮುಖ್ಯ ಕಾರ್ಯದರ್ಶಿ ಅವರಿಗೆ, ಚಂಚಲಕುಮಾರ ತಿಳಿಸಿದರು. ಬಳಿಕ ಅವರು, ಆಕಾಶವಾಣಿ ಬೆಂಗಳೂರು ಪ್ರಾದೇಶಿಕ ಸುದ್ದಿ ವಿಭಾಗ ಸೇರಿದಂತೆ, ಸಚಿವಾಲಯದ ವಿವಿಧ ಮಾಧ್ಯಮ ಘಟಕಗಳ ಮುಖ್ಯಸ್ಥರೊಂದಿಗೆ, ಸಂವಾದ ನಡೆಸಿದರು. ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಜಂಟಿ ಕಾರ್ಯದರ್ಶಿ, ಕೃಷ್ಣಕುಮಾರ ನಿರಾಲ ಪಾಲ್ಗೊಂಡಿದ್ದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

71ನೇ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ, ನಾಳೆಯಿಂದ ಆರಂಭವಾಗಲಿರುವ, ನವೆಂಬರ್ ತಿಂಗಳಲ್ಲಿ, 'ನೇಗಿಲಯೋಗಿ' ಯೋಜನೆ ಅನುಷ್ಠಾನಗೊಳ್ಳಲಿದ್ದು, ರಾಜ್ಯದ ರೈತರ ಆರ್ಥಿಕ ಪುನಃಶ್ಚೇತನ ಮತ್ತು ಯಂತ್ರೋಪಕರಣ ನೀಡಿ, ಸಬಲೀಕರಿಸುವ ಪ್ರಕಲ್ಪ ಜಾರಿಗೊಳ್ಳಲಿದೆ ಎಂದು, ಕೃಷಿ ಖಾತೆ ಸಚಿವ ಪಿ.ಎಂ. ನರೇಂದ್ರಸ್ವಾಮಿ, ತಿಳಿಸಿದ್ದಾರೆ. ಶಿವಮೊಗ್ಗ ಜಿಲ್ಲೆ, ಕೆಳದಿಯ ನವುಲೆಯ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ, ಕೃಷಿ ಕಾಲೇಜು ಆವರಣದಲ್ಲಿ, "ಬರ ನಿರ್ವಹಣೆಗಾಗಿ ನಾವೀನ್ಯತಾ ಕೃಷಿ" ಧ್ಯೇಯದ, 'ಕೃಷಿ ಮತ್ತು ತೋಟಗಾರಿಕೆ ಮೇಳ'ವನ್ನು ಉದ್ಘಾಟಿಸಿ, ಅವರು ಈ ವಿಷಯ ತಿಳಿಸಿದರು. ಶಿವಮೊಗ್ಗ ಲೋಕಸಭಾಕ್ಷೇತ್ರದ ಸಂಸದ, ಬಿ.ವೈ.ರಾಘವೇಂದ್ರ, ನೇಗಿಲ ಮಿಡಿತ ವಿಶೇಷ ಸಂಚಿಕೆ ಹಾಗೂ ರೈತರ ಯಶೋಗಾಥೆ ಬಿಡುಗಡೆಗೊಳಿಸಿದರು. ಕಾಸರಗೋಡಿನ, ಪ್ರಗತಿಪರ ಕೃಷಿಕ, ಪದ್ಮಶ್ರೀ ಸತ್ಯನಾರಾಯಣ ಬೆಳೇರಿ ಪಾಲ್ಗೊಂಡಿದ್ದರು.

<><><>

ಧಾರವಾಡದ, ಭಾರತೀಯ ತಂತ್ರಜ್ಞಾನ ಸಂಸ್ಥೆ – ಐ.ಐ.ಟಿ.ಯ, ಸ್ಪಿಕ್ ಮೆಕೆ ಹೆರಿಟೇಜ್ ಕ್ಲಬ್, ಕನ್ನಡ ರಾಜ್ಯೋತ್ಸವ ಹಾಗೂ ರಾಷ್ಟ್ರೀಯ ಏಕತಾ ದಿನದ ಸಂದರ್ಭದಲ್ಲಿ, ಇಂದು ರಾತ್ರಿ 8 ಗಂಟೆ 45 ನಿಮಿಷದಿಂದ, ನಾಳೆ ಬೆಳಗಿನ 7 ಗಂಟೆಯ ವರೆಗೆ, ವಿಶಿಷ್ಟ ಅಹೋರಾತ್ರಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ

– ಯಾಮಿನಿ, ಆಯೋಜಿಸಿದೆ. ಪದ್ಮಶ್ರೀ, ಪಂಡಿತ ಉಲ್ಲಾಸ ಕಶಾಳ್ಕರ, ಸೇರಿದಂತೆ ಶಾಸ್ತ್ರೀಯ ಸಂಗೀತ ಲೋಕದ ಅನೇಕ ದಿಗ್ಗಜರು ಪಾಲ್ಗೊಂಡು, ಯಾಮಿನಿ ಯಶಸ್ವಿಗೊಳಿಸಲಿದ್ದಾರೆ. ಐ.ಐ.ಟಿ. ಧಾರವಾಡದ, ವಿದ್ಯಾರ್ಥಿ ಕಲ್ಯಾಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ, ಸಹ ವಿದ್ಯಾಧಿಕಾರಿ, ಪ್ರೊಫೆಸರ್ ಸೂರ್ಯಪ್ರಕಾಶ ರಮೇಶ, ಯಾಮಿನಿ ಕುರಿತು ಮಾಹಿತಿ ನೀಡಿದ್ದಾರೆ.

<><><>

ಸೂರ್ಯಪ್ರಕಾಶ ರಮೇಶ ಧ್ವನಿ– 50 ಸೆಕೆಂದುಗಳು

<><><>

ಬೆಂಗಳೂರು – ಮುಂಬೈ ಮಧ್ಯೆ, ನಾಳೆ ನವೆಂಬರ್ ಒಂದು, 71ನೇ ಕರ್ನಾಟಕ ರಾಜ್ಯೋತ್ಸವ ದಿನದಂದು, ವಂದೇ ಭಾರತ ಸ್ಲೀಪರ್ ರೈಲು ಸೇವೆಗೆ, ಚಾಲನೆ ನೀಡಲಾಗುತ್ತಿದೆ. ಈ ರೈಲು ನಾಳೆ ಮಧ್ಯಾಹ್ನ ಬೆಂಗಳೂರಿನಿಂದ ಹೊರಟು, ಸಂಜೆ 6:30ಕ್ಕೆ ಕಲಬುರಗಿ ತಲುಪಲಿದೆ. ಪ್ರಯಾಣಿಕರು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ, ಸಂಭ್ರಮದ ಸ್ವಾಗತ ಕೋರಲು, ಸೋಲಾಪುರ ವಿಭಾಗೀಯ ರೇಲ್ವೆ ವಲಯ, ಪೂರ್ವ ಸಿದ್ಧತೆ ಮಾಡಿಕೊಂಡಿದೆ. ಮಾಜಿ ಸಂಸದ ಡಾಕ್ಟರ್ ಉಮೇಶ ಜಾಧವ, ಕಲಬುರಗಿಯಲ್ಲಿ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ, ಕಲ್ಯಾಣ ಕರ್ನಾಟಕದ ಜನರೂ ಸೇರಿದಂತೆ, ಕನ್ನಡಿಗರಿಗೆ, ಬೆಂಗಳೂರು–ಮುಂಬೈ ಮಧ್ಯದ ವಂದೇ ಭಾರತ ಸ್ಲೀಪರ್ ರೈಲಿನ ಮೂಲಕ, ದೀಪಾವಳಿಗೆ ವಿಶೇಷ ಕೊಡುಗೆ ನೀಡಿದ್ದಾರೆ ಎಂದರು.

<><><>

ಬೆಳಗಾವಿಯ, ಖ್ಯಾತ ಸರ್ವೋದಯ ಕಾರ್ಯಕರ್ತ, ಗಾಂಧಿವಾದಿ, ಶಿವಾಜಿ ಕಾಗಣಿಕರ ಅವರ, ವ್ಯಕ್ತಿತ್ವ ಮತ್ತು ಕೃತಿತ್ವದ ಪರಿಚಯಾತ್ಮಕ ಕೃತಿ, 'ಗುಡ್ಡಗಾಡಿನ ಗಾಂಧಿ' ಇಂದು ಸಂಜೆ 6 ಗಂಟೆಗೆ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ, ಶ್ರೀ ರಾ.ಹ. ದೇಶಪಾಂಡೆ ಸಭಾಭವನದಲ್ಲಿ, ಲೋಕಾರ್ಪಣೆಯಾಗಲಿದೆ. ಗದಗ ಜಿಲ್ಲೆ, ಮುಂಡರಗಿ ತಾಲೂಕು, ಕಪ್ಪತಗುಡ್ಡದ ನಂದಿವೇರಿ ಮಠದ, ಶ್ರೀ ಶಿವಕುಮಾರ ಸ್ವಾಮೀಜಿ, ಕೃತಿ ಬಿಡುಗಡೆಗೊಳಿಸಲಿದ್ದು, ಕೃತಿಕಾರ್ತಿ ಶಾರದಾ ಗೋಪಾಲ ದಾಬಡೆ ಪಾಲ್ಗೊಳ್ಳಲಿದ್ದಾರೆ. ಖ್ಯಾತ ಸಾಹಿತಿ ಹಾಗೂ ವಿಮರ್ಶಕ, ಡಾಕ್ಟರ್ ಶ್ರೀಧರ ಹೆಗಡೆ ಭದ್ರನ್, ಕೃತಿ ಪರಿಚಯಿಸಲಿದ್ದಾರೆ.

<><><>

ಮಾಜಿ ಸಚಿವ ಹಾಗೂ ಸಂಸದ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದ, ದಿವಂಗತ ಶಿವಾನಂದ ಕೌಜಲಗಿ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಬೆಳಗ್ಗೆ 11 ಗಂಟೆಗೆ, ಬೆಳಗಾವಿ ಜಿಲ್ಲೆ, ಬೈಲಹೊಂಗಲದ, ಅನಿಗೋಳದ ರುದ್ರಭೂಮಿಯಲ್ಲಿ ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

71ನೇ ಕರ್ನಾಟಕ ರಾಜ್ಯೋತ್ಸವ; ನಾಡು-ನುಡಿಯ, 26 ವಿವಿಧ ಕ್ಷೇತ್ರಗಳ, 71 ಜನ ಸಾಧಕರಿಗೆ, ರಾಜ್ಯೋತ್ಸವ ಪ್ರಶಸ್ತಿ.

ಸರ್ದಾರ ವಲ್ಲಭಭಾಯಿ ಪಟೇಲ ಅವರ, 151ನೇ ಜಯಂತ್ಯುತ್ಸವ; ನಾಡಿನಾದ್ಯಂತ ರಾಷ್ಟ್ರೀಯ ಏಕತಾ ದಿನಾಚರಣೆ.

ಮಾಧ್ಯಮ ಮತ್ತು ಮನೋರಂಜನಾ ಪರಿಸರ ವ್ಯವಸ್ಥೆ ಬಲಪಡಿಸಲು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ, ಚಂಚಲಕುಮಾರ, ಒತ್ತು.

ನಾಳೆ ನವೆಂಬರ್ ಒಂದನೇ ತಾರೀಖು, ಬೆಂಗಳೂರು – ಮುಂಬೈ ಮಧ್ಯೆ, ವಂದೇ ಭಾರತ ಸ್ಲೀಪರ್ ರೈಲು ಸೇವೆಗೆ, ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>